ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:21-08-2017

ಸುತ್ತೋಲೆ

ವಿಷಯ: 2017ರ ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಬಗ್ಗೆ ಮಾಹಿತಿ

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017ರ ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಕುರಿತು ವಿವಿಧ ಹಂತದ ಪರೀಕ್ಷಾ ಕಾರ್ಯಗಳಿಗೆ ಈ ಕೆಳಗಿನಂತೆ ದಿನಾಂಕಗಳನ್ನು ನಿಗಧಿ ಮಾಡಲಾಗಿದ್ದು, ಸಂಬಂಧಪಟ್ಟ ಉಪನ್ಯಾಸಕರು/ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರುವಂತೆ ತಿಳಿಸಲಾಗಿದೆ.

1. ಪ್ರಸಕ್ತ ಸೆಮಿಸ್ಟರ್‌ನ 1, 3 ಮತ್ತು 5 ನೇ ಸೆಮಿಸ್ಟರ್ ತರಗತಿಗಳ ಶೈಕ್ಷಣಿಕ ಅವಧಿಯ ಮುಕ್ತಾಯ ದಿ:28-10-2017
2. ಪ್ರಾಯೋಗಿಕ ಪರೀಕ್ಷೆಗಳ ಪ್ರಾರಂಭ ಮತ್ತು ಮುಕ್ತಾಯ ದಿನಾಂಕ: 02-11-2017 ರಿಂದ 13-11-2017 ರವರೆಗೆ
3. ಥಿಯರಿ ಪರೀಕ್ಷೆಗಳ ಪ್ರಾರಂಭ ಮತ್ತು ಮುಕ್ತಾಯ ದಿನಾಂಕ: 15-11-2017 ರಿಂದ 30-11-2017 ರವರೆಗೆ
4. ಪಾಲಿಟೆಕ್ನಿಕ್ ಸಂಸ್ಥೆಗಳು BTELinx ವೆಬ್‌ಪೋರ್ಟಲ್ ಮೂಲಕ ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯನ್ನು ನವೀಕರಿಸುವುದು/ಇಂದೀಕರಿಸುವುದು ದಿನಾಂಕ:01-09-2017 ರಿಂದ 20-09-2017 ಮೌಲ್ಯಮಾಪಕರು/ಪರೀಕ್ಷಕರುಗಳ ಜೊತೆಗೆ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು, ಚಾಲ್ತಿಯಲ್ಲಿರುವ ಮೊ.ಸಂಖ್ಯೆ. ಹಾಗೂ ಇ-ಮೇಲ್ ವಿಳಾಸಗಳನ್ನು BTELinx ವೆಬ್‌ಪೋರ್ಟಲ್‌ನಲ್ಲಿನ Staff list ನಲ್ಲಿ ಅಪ್‌ಡೇಟ್ ಮಾಡುವುದು ಕಡ್ಡಾಯವಾಗಿರುತ್ತದೆ.
5. ಸಂಸ್ಥೆಗಳಲ್ಲಿ ಮಾಸ್ಟರ್ ಕ್ಯಾಂಡಿಡೇಟ್ ಲಿಸ್ಟ್ ಅನ್ನು ಆನ್‌ಲೈನ್ ಮೂಲಕ ಇಂದೀಕರಿಸುವುದು/ ನವೀಕರಿಸುವುದು ಮತ್ತು ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿ ತಯಾರಿಸುವುದು ದಿನಾಂಕ: 01-09-2017 ರಿಂದ 20-09-2017 ರವರೆಗೆ

   *ವಿಶೇಷ ಸೂಚನೆ:* ಪ್ರಥಮ ಸೆಮಿಸ್ಟರ್‌ನ ಎಲ್ಲಾ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರವೇಶಾನುಮೋದನೆಗಾಗಿ ಕಾಯದೆ ಕ್ಯಾಂಡಿಡೇಟ್ ಲಿಸ್ಟ್‌ನಲ್ಲಿ ಅಪ್‌ಡೇಟ್ ಮಾಡುವುದು. ತದನಂತರ ಪ್ರವೇಶಾನುಮೋದನೆಯಾಗದ ವಿದ್ಯಾರ್ಥಿಗಳ ಹೆಸರುಗಳನ್ನು ಕ್ಯಾಂಡಿಡೇಟ್ ಲಿಸ್ಟ್‌ನಿಂದ Delete ಮಾಡತಕ್ಕದ್ದು.
6. ಸಂಸ್ಥೆಗಳಿಂದ ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿ ಆನ್‌ಲೈನ್‌ನಲ್ಲಿ ಸ್ವೀಕರಿಸುವುದು ದಿನಾಂಕ: 25-09-2017
7. ಥಿಯರಿ ಪರೀಕ್ಷಾ ಅವಧಿಯಲ್ಲಿ ಆಂತರಿಕ ಅಂಕಗಳನ್ನು ಪರಿವೀಕ್ಷಕರು ಪರಿಶೀಲಿಸುವುದು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು
8. ಪ್ರಾಯೋಗಿಕ ಪರೀಕ್ಷಕರ ಪಟ್ಟಿಯನ್ನು ಆನ್‌ಲೈನ್‌ನಲ್ಲಿ(BTELinx) ಪಾಲಿಟೆಕ್ನಿಕ್‌ಗಳಿಗೆ ಕಳುಹಿಸುವುದು ದಿ:28-10-2017
9. ಸಂಸ್ಥೆಗಳು ಆನ್ ಲೈನ್‌ನಲ್ಲಿ (BTELinx) ಪ್ರವೇಶ ಪತ್ರಗಳನ್ನು ಮುದ್ರಿಸುವುದು ದಿನಾಂಕ: 30-10-2017

ಸಂಸ್ಥೆಗಳಲ್ಲಿ ಪ್ರಿನ್ಸಿಪಾಲರು ಬಿಟಿಇಲಿಂಕ್ಸ್ ಆನ್‌ಲೈನ್ ವೆಬ್‌ಪೋರ್ಟಲ್ ಅನ್ನು ತಾವೇ ಸ್ವತ: ಉಪಯೋಗಿಸುವುದರ ಜೊತೆಗೆ ಕನಿಷ್ಠ ಇಬ್ಬರು ಹಿರಿಯ ವಿಭಾಗಾಧಿಕಾರಿಗಳನ್ನು ವೆಬ್‌ಪೋರ್ಟಲ್ ಉಪಯೋಗಿಸಲು ಕಡ್ಡಾಯವಾಗಿ ನಿಯುಕ್ತಿಗೊಳಿಸಲು ತಿಳಿಸಲಾಗಿದೆ.

ಪರೀಕ್ಷಾ ದಿನಾಂಕಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಪ್ರಯುಕ್ತ ಪ್ರಸಕ್ತ ಸಾಲಿನ ಎಲ್ಲಾ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ, ಸದರಿ ಶೈಕ್ಷಣಿಕ ವರ್ಷದ ಪಠ್ಯಕ್ರಮವನ್ನು ವಿಶೇಷ ತರಗತಿಗಳನ್ನು ನಡೆಸುವುದೂ ಸೇರಿದಂತೆ ಪಾಠ ಪ್ರವಚನಗಳನ್ನು ನಿಗಧಿತ ಅವಧಿಯಲ್ಲಿ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ:

ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ. [ವಿದ್ಯಾರ್ಥಿಗಳಿಗೆ ಸುತ್ತೋಲೆ]

ಪ್ರತಿ: 1. ಕಂಪ್ಯೂಟರ್ ವಿಭಾಗಕ್ಕೆ
2. ಇಸಿಎಸ್/ಎಫ್ಎಸ್/ಇಎಪಿ/ಇಆರ್‌ಎಸ್ ವಿಭಾಗಗಳಿಗೆ
3. ಇ ಗವರ್ನೆನ್ಸ್ ವಿಭಾಗಕೆ
4. ಕಾರ್ಯದರ್ಶಿಯವರ ಆಪ್ತ ಶಾಖೆಗೆ